


## ಸಮುದ್ರ ಮಥನ




### ಆಪ್ತ ಲೇಖನ

ಗುರುರಾಜ ಕರಜಗಿಯವರ 'ಎಲ್‌ಕೆಜಿ ಯುಕೆಜಿ ಹೇಗಿರಬೇಕು?' ಲೇಖನ (ಸುಧಾ ನ.19) ಆಪ್ತವಾಗಿತ್ತು. ಮಕ್ಕಳ ಸ್ಕೂಲ್ ಮನೇಲಲ್ವೆ? ಕಲಿಕೆಯ ತೊಂದರೆ ಲೇಖನಗಳು ಉಪಯುಕ್ತ ಮಾಹಿತಿ ನೀಡಿವೆ.

ಪಿ.ಗೋವಿಂದರಾಜ್, ಶಿವಮೊಗ್ಗ/ ಸತೀಶ್ ಶೆಟ್ಟಿಗಾರ್, ಜಪ್ತಿ/ ಮಹಾದೇವಿ ಕಾಸರ, ಶಿವಮೊಗ್ಗ/ ಕುಬೇರಪ್ಪ ಎಂ. ವಿಭೂತಿ, ಹರಿಹರ

### ಉಳ್ಳವರಿಗೆ ಮಾತ್ರ ಎಲ್‌ಕೆಜಿ!

ಕೇವಲ ಉಳ್ಳವರ ಮಕ್ಕಳಿಗಷ್ಟೇ ಎಲ್.ಕೆ.ಜಿ.-ಯು.ಕೆ.ಜಿ. ಶಿಕ್ಷಣ ದೊರೆಯುತ್ತದೆ. ಏನೂ ಪಾಪ ಮಾಡದ ಬಡ ಮಕ್ಕಳಿಗೂ ದೊರೆಯುವಂತೆ ಸರ್ಕಾರ ಆತ್ಮಾವಲೋಕನ ಮಾಡಿಕೊಂಡು ಕಾರ್ಯಪ್ರವೃತ್ತವಾಗಲಿ.

-ಕೆ.ಎಸ್. ರಘುನಾಥರಾವ್ ಫಲ್ಗುಣಿ, ಚಿಕ್ಕಮಗಳೂರು

### ಪ್ರತಿಮೆ ನಾಶ-ಪಕ್ಷಪಾತ

ವಿಚಾರ ಲಹರಿಯಲ್ಲಿ ಪ್ರತಿಮಾ ಸಂಸ್ಕೃತಿಯ ಕುರಿತು ಶಿಕಾಕು ಅವರು– ಬೌದ್ಧ, ಜೈನ ಪ್ರತಿಮೆಗಳನ್ನು ಹಾಗೂ ಬಾಬ್ರಿ ಮಸೀದಿಯನ್ನು ಹಿಂದೂಗಳು ನಾಶ ಮಾಡಿದರು ಎಂದು ಬರೆದಿದ್ದಾರೆ. ಅದು ಸರಿ. ಆದರೆ ಮೊಘಲರ ಕಾಲದಲ್ಲಿ ಅನೇಕಾನೇಕ ಮಂದಿರಗಳು, ದೇವರ ಪ್ರತಿಮೆಗಳು ಛಿದ್ರ ಛಿದ್ರಗೊಂಡಿದ್ದು ಶಿಕಾಕು ಅವರಿಗೆ ಜ್ಞಾಪಕಕ್ಕೆ ಬರಲಿಲ್ಲವೇ? ಅದನ್ನು ಬರೆದರೆ ಮತೀಯ ಭಾವನೆ ಕೆರಳಿಸಿದಂತಾಗುತ್ತದೆ ಎಂಭ ಭಯ ಶಿಕಾಕು ಅವರಿಗಿದ್ದರೆ ಪ್ರತಿಮೆ ನಾಶದ ಬಗ್ಗೆ ಬರೆಯಲೇಬಾರದಿತ್ತು. ಹೀಗೆ ಪಕ್ಷಪಾತ ತೋರಿದರೆ 'ವಿಚಾರ ಲಹರಿ' ಹೇಗಾಗುತ್ತದೆ?

-ಎಚ್.ಬಸವಾರಾಧ್ಯ, ಬೆಂಗಳೂರು

### ಮನೋಜ್ಞ ಕಥೆ

ಹೇಮಂತಕುಮಾರ ದೇಸಾಯರ 'ವಿಕಲಚೇತನ' ಕಥೆ ಮನೋಜ್ಞವಾಗಿತ್ತು.

-ಎಚ್.ವಿ. ಬಸವರಾಜು, ಸಂತೇಬೆನ್ನೂರು/ ವೈ.ರಮ್ಯ, ಹೊಳೆನರಸೀಪುರ

### ಕಥೆ ಚೆನ್ನಾಗಿತ್ತು..

ಎಫ್.ಎಂ. ನಂದಗಾಂವರ 'ಯಡ್ಡಿ ಮಾಮ...' ಕಥೆ ಚೆನ್ನಾಗಿತ್ತು.

-ಅನುಪಕೃಷ್ಣ ಭಟ್, ವಿಟ್ಲ/ ಕೆ. ಗಿರೀಶ್. ಮಂಡ್ಯ/ ಶೈಲಜಾ, ಬೆಂಗಳೂರು/ ರಾಬರ್ಟ್ ಝಳಕಿ, ವಿಲ್ಸನ್ ಸಕ್ರಿ, ಹುಬ್ಬಳ್ಳಿ

### 'ಹುಚ್ಚಿ'ನ ಹಿಂದೆ!

'ಅಂಕೇಗೌಡರ ಪುಸ್ತಕ ಸಾಮ್ರಾಜ್ಯ' (ಸುಣಗಾರ ಮಂಜುನಾಥ) ಗೌಡರ ಹೊತ್ತಗೆಯ ಹುಚ್ಚಿನ ಹಿಂದೆ– ಅಲ್ಲಲ್ಲ, ಮುಂದೆ ಅವರ 'ಧರ್ಮ' ಪತ್ನಿಯಿದ್ದಾರೆ ಎಂದೇ ಆ ಅದ್ಭುತ ಯಶಸ್ಸು ಸಾಧ್ಯವಾಗಿದೆ. (ಪುಸ್ತಕಗಳ ಒಲವಿಲ್ಲದೆ ಒಲೆಗೊ ತೂಕಕ್ಕೊ ಹಾಕುವ ಗೃಹಿಣಿಯರೂ ಇದ್ದಾರು!)

-ಸಿಪಿಕೆ, ಮೈಸೂರು

ಲೇಖನ ಮೆಚ್ಚಿದವರು: ಎಸ್.ಲಕ್ಷ್ಮಿನರಸಿಂಹ, ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ/ ಟಿ.ಎನ್.ಸರಸ್ವತಿ, ತಿಪಟೂರು/ ತರಂಗಿಣಿ, ತುಮಕೂರು

### ಸಚಿನ್‌ದು ಗೆಲುವೆ?

ನಿರಂತರ ದಾಖಲೆಗಳಲ್ಲಿ ನಿರತರಾಗಿರುವ ಸಚಿನ್‌ರವರ ಸಾಧನೆ ವ್ಯಕ್ತಿಗತವಾಗದೆ ತಂಡಕ್ಕೂ ಲಭ್ಯವಾಗಿದ್ದಿದ್ದರೆ ಅನುರೂಪವಾಗಿರುತ್ತಿತ್ತು.

-ನರೇಂದ್ರ ಸಿರಕಜೆ, ಮೈಸೂರು

ಲೇಖನ ಮೆಚ್ಚಿದವರು: ಎಚ್.ಆನಂದಕುಮಾರ್, ಚಿತ್ರದುರ್ಗ/ ಎಚ್.ಎನ್.ವಿಶ್ವನಾಥ, ಶಿವಮೊಗ್ಗ/ ವಿ.ಅರ್ಜುನ, ಮಂಡ್ಯ/ ಪಿ.ಎ.ಸುಧೀಂದ್ರ, ಬೆಂಗಳೂರು

### ಶಂಕರ್ ನಿಧನ ಸೆ. 10 ಅಲ್ಲ

ನ. 12ರ ಗಾಂಧೀನಗರ ಪೋಸ್ಟ್‌ನ 'ಶಂಕರಗೆ ನಾಗಾಂಜಲಿ' ಬರಹದಲ್ಲಿ ಶಂಕರನಾಗ್ ನಿಧನ ಹೊಂದಿದ್ದು. ಸೆಪ್ಟೆಂಬರ್ 10 ಎಂದಿದೆ. ಅದು ಸೆಪ್ಟೆಂಬರ್ 30 ಎಂದಿರಬೇಕಿತ್ತು.

-ಮುಕುಂದ ಹೊರಕಲ್ಲ, ವಾಡಿ

### ಅಭಿನಯ ತರಬೇತಿ

ಬೆಂಗಳೂರಿನ ಪ್ರತಿಮಾ ನಾಟಕ ಸಂಶೋಧನ ಕೇಂದ್ರವು ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ ಆರ್.ನಾಗೇಶ್ ಮಾರ್ಗದರ್ಶನದಲ್ಲಿ ಅಭಿನಯ ಕಾರ್ಯಾಗಾರವನ್ನು ಆಯೋಜಿಸಿದೆ. ಆಸಕ್ತರು ಹೆಚ್ಚಿನ ಮಾಹಿತಿಗೆ ಸಂಘಟಕ ವೆಂಕಟರಾಜು ಅವರ 9741899962ಗೆ ಸಂಪರ್ಕಿಸಬಹುದು.